**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 1178/2022**

| **ಪಿರ್ಯಾದುದಾರರು :** | **ವಿರುದ್ಧ** | **ಆರೋಪಿತರು:** |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಪುನೀತ್ ಪಿ ಎಸ್ ಬಿನ್ ಪ್ರಕಾಶ ಪಿ ಎಸ್<br>ವಯಸ್ಸು: 19 ವರ್ಷ,<br>ವಾಸ: ಗೊಪ್ಪೇನಹಳ್ಳಿ ಗ್ರಾಮ, ಚನ್ನಗಿರಿ ತಾ:<br>ದಾವಣಗೆರೆ ಜಿಲ್ಲೆ |

**<u>ದೋಷಾರೋಪಣೆ</u>**

**ಶ್ರೀಮತಿ ಮಹಾಲಕ್ಷ್ಮೀ ಜಿ 1**ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಚನ್ನಗಿರಿ ಕಡೆಯಿಂದ ತಾವರೆಕರೆ ಕಡೆಗೆ ಹೋಗುವ 10 ನೇ ಮೈಲಿ ಕಲ್ಲಿನ ಮುಂದೆ ಚನ್ನಗಿರಿ-ಬೀರೂರು ರಸ್ತೆಯಲ್ಲಿ 1ನೇ ಅರೋಪಿಯಾದ ಚಾಲನಾ ಪರವಾನಿಗೆ ಇಲ್ಲದೆ 2ನೇ ಆರೋಪಿತನ ಬಾಬ್ತು ಕೆಎ/51-ಎಂಎಫ್-7119 ನೇ ಕಾರನಲ್ಲಿ ಚಾಸಾ-8 ಹಾಗೂ ಮೃತ ಓಂಕಾರಮೂರ್ತಿ ರವರನ್ನು ಕೂರಿಸಿಕೊಂಡು ತಾವರೆಕೆರೆ ಕಡೆಯಿಂದ ಗೊಪ್ಪೇನಹಳ್ಳಿ ಗ್ರಾಮಕ್ಕೆ ಬರಲು ಬರುತ್ತಿದ್ದಾಗ ನೀನು ತನ್ನ ಕಾರನ್ನು ಅತೀ ವೇಗ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಬಾಗದಲ್ಲಿ ಚಾಲನೆ ಮಾಡಿಕೊಂಡು ನಿನ್ನ ನಿಯತ್ರಣ ತಪ್ಪಿದ ಕಾರು ರಸ್ತೆಯ ಬಲಭಾಗದಲ್ಲಿದ್ದ ಗುಂಡಿಗೆ ಬಿದ್ದು ಅಲ್ಲಿಂದ ಮರಕ್ಕೆ ಡಿಕ್ಕಿಯಾಗಿ ಅಪಘಾತಪಡಿಸಿರುತ್ತೀರಿ ಅ ಮೂಲಕ ಭಾ.ದಂ.ಸಂ.ಕಲಂ 279 ಮತ್ತು 181 ಐ ಎಂ ವಿ ಕಾಯ್ದೆ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಮೇಲ್ಕಂಡ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿದ ಕಾರು ಗುಂಡಿಗೆ ಬಿದ್ದು ಮರಕ್ಕೆಡಿಕ್ಕಿಯಾದ ಪರಿಣಾಮ ಕಾರಿನಲ್ಲಿದ್ದ ಓಂಕಾರಮೂರ್ತಿ

ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತಾರೆ, ಆ ಮೂಲಕ ಭಾ.ದಂ.ಸಂ.ಕಲಂ 304(ಎ) ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಅರೋಪಿಯಾದ ನೀನು ಮೇಲ್ಕಂಡ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿದ ಕಾರು ಗುಂಡಿಗೆ ಬಿದ್ದು ಮರಕ್ಕೆ ಡಿಕ್ಕಿಯಾದ ಪರಿಣಾಮ ಕಾರಿನಲ್ಲಿದ್ದ ಚಾಸಾ-8 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ನಿಮ್ಮ ವಿರುದ್ದ ಭಾ.ದಂ.ಸಂ.ಕಲಂ 338 ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 17-12-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**

**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ:1178/2022**

**1. ಕರ್ನಾಟಕ ಸರ್ಕಾರ (ಚನ್ನಗಿರಿ  ಪಿ.ಎಸ್ )**

**ವಿರುದ್ಧ**

ಎ1. ಪುನೀತ್ ಪಿ ಎಸ್ ಬಿನ್ ಪ್ರಕಾಶ ಪಿ ಎಸ್
ವಯಸ್ಸುಃ 19 ವರ್ಷ,

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 17-12-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 17-12-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**